# ಬಾರೋ ಬಾರಯ್ಯ ನಮ್ಮ ಬಾಲ ಗೋಪಾಲಕೃಷ್ಣ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** The wordings are as per Ref. 1. These wordings are followed by the singer. Wordings in Ref. 2 are almost matching with Ref. 1.

ರಾಗ ತೋಡಿ ತಾಳ ಅಟ್ಟ

ಬಾರೋ ಬಾರಯ್ಯ ನಮ್ಮ ಬಾಲ ಗೋಪಾಲಕೃಷ್ಣ || ಪ ||

ಜಾರತನವ ಬಿಡೋ ಜಾನಕೀ ರಮಣನೆ
ನಾರಿಯರೆಲ್ಲರು ನವನೀತ ಚೋರನೆಂದು ದೂರು ಹೇಳಲಿ
ಸಾರ ಒಡಿದ ಶ್ರೀ ನೀಲಗಿರಿ ವಾಸ || ಅಪ ||

ಅನಿರುದ್ಧ ಜನಾರ್ಧನ ಆನಂದ ನಿಲಯ ಹರಿ
ಮುನಿ ಮೌನಿ ಸಹವಾಸ ಮುಚಕುಂದ ವರದ
ಘನ ನೀಲ ಮೇಘ ಶ್ಯಾಮ ಕಾಮಿತಾರ್ಥ ಕಮಲ ನಾಭ
ಸನಕಾದಿ ವಂದ್ಯ ಸಾಗರ ಶಯನ ಸಾರ ನೇತ್ರ ಶಾಶ್ವತ ರೂಪ || 1 ||

ಮುದ್ದು ಕೊಟ್ಟೇನು ಬಾರೋ ಮುನಿಸದೇತಕೊ ತಂದೆ
ಬುದ್ಧಿ ಕೇಳಯ್ಯ ನಮ್ಮ ಭದ್ರಾದ್ರಿ ರಮಣ
ಹದ್ದನು ಏರಿಕೊಂಡು ಅಮರರ ಕೂಡಿ ಆಡಿ
ಬುದ್ಧನಾಥನೆ ಬೆಣ್ಣೆ ಕದ್ದ ಕಳ್ಳನೆ ಕಸ್ತೂರಿ ರಂಗನೆ || 2 ||

ನರಹರಿ ಮಾಧವ ವಿಷ್ಣು ನಂದ ನಂದನನೆ
ಶರಧಿ ಬಂಧನೆ ನಿನಗೆ ಶರಣುವ ಹೊಂದಿದೆ

ಸೇರಿದ ಮೇಲೆ ನಿನ್ನ ಬೆರೆದೆ ಅಪ್ಪಯ್ಯ ರಂಗ
ಶರಣ ಮಂದಾರ ಶೇಷ ಗಿರೀಶ ವರದ ಪುರಂದರ ವಿಠಲ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಆನಂದನಿಲಯ** – ಬೆಟ್ಟದ ಮೇಲಿನ ಗುಡಿಯಲ್ಲಿರುವ ವಿಮಾನದ ಹೆಸರು.

**ಮುನಿಸದೇತಕೊ** – ಮುನಿಸುವುದೇತಕೊ; ಸಿಟ್ಟುಗೊಳ್ಳುವುದು ಯಾತಕ್ಕೆ.

**ಭದ್ರಾದ್ರಿರಮಣ** – ಭದ್ರಾಚಲದಲ್ಲಿರುವ ದೇವರು.

**ಹದ್ದನು** – ಗರುಡನನ್ನು.

**ಶರಧಿ ಬಂಧನ** – ರಾಮಾವತಾರದಲ್ಲಿ.

**Classification:** Keerthane
**Ankita:** varada purandara vittala
**Location:** Tirupati
**Category:** Krishna Stuti, Vishnu Stuti
**Sub-Category:** Vishnu, Krishna, Gopala, sita, rama, ranga, Narasimha, benne, kalla, Ananda, muni, muchukunda, padma, Samudra, tande, buddi, garuda, Kasturi, ranga, Madhava, shesha, srinivasa,
**Pravachana:** NA
**Explanation:** NA